ತಾರೀಖು 21ನೆ ಮಾರ್ಚಿ 1907.

ನಂ. 8720—ಸ್ಯಾನಿಟರಿ 21-06-103, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಪಂಗುಣಿ ಉತ್ತಿರಂ ಉತ್ಸವ ಮತ್ತು ದನಗಳ ಸಂತೆ	ಕರುಗುಮಲೈ ಗ್ರಾಮ	ಒಟ್ಟಪಿದರಂ	ತಿನ್ನವಲ್ಲಿ	15—3—07	8—4—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 16ನೆ ಮಾರ್ಚಿಂ 273ನೆ ನಂಬರ್ ಮೆಮೊ ಪ್ರಕಾರ.
* ಕುಟಂಡರಸ್ವಾಮಿಯವರ ಉತ್ಸವ ಮತ್ತು ದನಗಳ ಸಂತೆ	ಕುವಗಂ ಮತ್ತು ಅದರ ಸುತ್ತಮುತ್ತಲಿರುವ ಗ್ರಾಮಗಳು	ತಿರುಕ್ಕೋಯಿಲೂರು	ದಕ್ಷಿಣ ಆರ್ಕಾಡು	4—4—07 ಉಭಯ ದಿನಗಳೂ ಸೇರಿ.	24—4—07	ಡಿಟೋ ನಂಬರ್ 269
ಹಿರಿಯಡಕ ವೀರಭದ್ರಸ್ವಾಮಿಯವರ ದೇವಸ್ಥಾನದ ರಥೋತ್ಸವ	ಬೊಮ್ಮರಬೆಟ್ಟಗ್ರಾಮ	ಉಡುಪಿ	ದಕ್ಷಿಣ ಕನ್ನಡೀಯ	20—4—07	1—5—07	ಡಿಟೋ ನಂಬರ್ 267
† ಕಾಲಿಯಮ್ಮನ ಜಾತ್ರೆ	ಅದಮ್ಮನ ಕೋಟೆ	ಧರ್ಮಪುರಿ	ಸೇಲಂ	25—3—07 ಉಭಯ ದಿನಗಳೂ ಸೇರಿ.	20—4—07	ಡಿಟೋ ನಂಬರ್ 275

ಷರಾಗಳು.

* ಕುವಗಂನಲ್ಲಿಯಾಗಲಿ ಅಥವಾ ಅದಕ್ಕೆ 5 ಮೈಲಿ ಘಾಸಲೆಯಲ್ಲಿರುವ ಯಾವ ಗ್ರಾಮಗಳಲ್ಲಿಯಾಗಲಿ ದನಗಳ ಸಂತೆಯನ್ನು ನಡೆಸುವದನ್ನು ನಿಷೇಧಿಸಿದೆ.

† ಈ ಜಾತ್ರೆಗೆ ಯಾತ್ರೆ ಹೋಗುವದನ್ನು ನಿಷೇಧಿಸಿದೆ.

ತಾರೀಖು 18ನೆ ಮಾರ್ಚಿ 1907.

ನಂ. 8433—ಸ್ಯಾನಿಟರಿ-66-06—36, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧ ಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳಿಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.		ತಾಲ್ಲೂಕು.
ಉದ್ದೂರು	...	ಹಾಸನ
ದೊಡ್ಡಬಸವನಹಳ್ಳಿ	...	ಡಿಟೋ
ಬೆನ್ನೂರು	..	ಬೇಲೂರು
ಚನ್ನಾಪುರ	..	ಡಿಟೋ
ಮಾಡಬಳಕೊಪ್ಪಲು	...	ಚನ್ನರಾಯಪಟ್ಟಣ
ಕೋಡಿಗರಹಳ್ಳಿ	..	ಆಲೂರು ಸಬ್ ತಾಲ್ಲೂಕು.

ತಾರೀಖು 25ನೆ ಮಾರ್ಚಿ 1907.

ನಂ. ಜೆ. 3009—ಪೋಲೀಸ್ 3—06—9, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಈಸ ನೋಡುತ್ತಿರುವ ಆಕ್ಟಿಂಗ್ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರ ಮಿ॥ ಬಿ. ರಾಮಸ್ವಾಮಯ್ಯ, ಬಿ. ಎ., ಯವರಿಗೆ ಮೈಸೂರು ರೂಲ್ಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ 1907ನೆ ಮಾರ್ಚಿ 5ನೆ ತಾರೀಖಿನಿಂದ 10 ದಿವಸಗಳ ಪ್ರಿವಿಲೇಜ್ ಜಾ ಕೊಡಲ್ಪಟ್ಟಿತು.